# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1414** |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೆಪಿಟಿಸಿಎಲ್‌ನಲ್ಲಿ ಬಾಕಿ ಇರುವ ನೇಮಕಾತಿ ಅಧಿಸೂಚನೆಗಳ ಪ್ರಸ್ತುತ ಸ್ಥಿತಿ ಏನು: (ಮಾಹಿತಿ ನೀಡುವುದು)</td><td>ಕವಿಪ್ರನಿನಿಯಲ್ಲಿ ಯಾವುದೇ ನೇಮಕಾತಿ ಅಧಿಸೂಚನೆಗಳು ಬಾಕಿ ಇರುವುದಿಲ್ಲ.<br>ಆದಾಗ್ಯೂ,<br>1. ಕವಿಪ್ರನಿನಿಯಲ್ಲಿ ಖಾಲಿ ಇದ್ದ ಸಹಾಯಕ ಇಂಜಿನಿಯರ್ (ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 01.02.2022 ರಂದು ಉದ್ಯೋಗ ಪ್ರಕಟಣೆಯನ್ನು ಹೊರಡಿಸಿ, 2025 ರ ಅವಧಿಯಲ್ಲಿ ನೇಮಕಾತಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಆದರೆ, ಈ ಮಧ್ಯೆ ಕೆಲವು ಅಭ್ಯರ್ಥಿಗಳು ಸಲ್ಲಿಸಿದ್ದ ರಿಟ್ ಮೇಲ್ಮನವಿ ಸಂಖ್ಯೆ: 1155/ 2023 ಹಾಗೂ ಸಂಬಂಧಿತ ಇತರೆ ರಿಟ್ ಮೇಲ್ಮನವಿಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು, ದಿನಾಂಕ: 05.11.2025 ರಂದು ಇತ್ಯರ್ಥಪಡಿಸಿ, ದಿನಾಂಕ: 04.02.2023 ರಂದು ಪ್ರಕಟಿಸಲಾಗಿದ್ದ ಫಲಿತಾಂಶದ ಅನ್ವಯ ಅರ್ಹ ಅಧಿಕ ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>2. ಮುಂದುವರೆಯುತ್ತಾ, ಕವಿಪ್ರನಿನಿಯಲ್ಲಿ ಖಾಲಿ ಇದ್ದ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 14.10.2024 ರಂದು ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ:
<table>
<tr><th>ಹುದ್ದೆಯ ಹೆಸರು</th><th>ಆಯ್ಕೆಗೊಂಡ ಅಭ್ಯರ್ಥಿಗಳ ಸಂಖ್ಯೆ</th><th>ನೇಮಕಾತಿ ಆದೇಶ ಜಾರಿ ಮಾಡಿದ ಸಂಖ್ಯೆ</th></tr>
<tr><td>ಕಿರಿಯ ಸ್ಟೇಷನ್ ಪರಿಚಾರಕ</td><td>410</td><td>391</td></tr>
<tr><td>ಕಿರಿಯ ಪವರ್‌ಮ್ಯಾನ್</td><td>81</td><td>71</td></tr>
<tr><td>ಒಟ್ಟು</td><td>491</td><td>462</td></tr>
</table>
ಬಾಕಿ ಉಳಿದ 29 ಅಭ್ಯರ್ಥಿಗಳ ಮೂಲ ದಾಖಲಾತಿಗಳ ನೈಜತೆ ಸ್ವೀಕೃತಿಗೊಳ್ಳಬೇಕಿದ್ದು, ನೈಜತೆ ಸ್ವೀಕೃತಿಗೊಂಡ ನಂತರ ನೇಮಕಾತಿ ಆದೇಶ ಹೊರಡಿಸಲು ಕ್ರಮವಹಿಸಲಾಗುವುದು.</td></tr>
<tr><td>ಆ)</td><td>ಕೆಪಿಟಿಸಿಎಲ್‌ನಲ್ಲಿ ತಾಂತ್ರಿಕ ಸಿಬ್ಬಂದಿ ಮತ್ತು ಎಂಜಿನಿಯರ್‌ಗಳ ಕೊರತೆ ಇರುವುದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ;</td><td>ಕವಿಪ್ರನಿನಿಯಲ್ಲಿ, ಅವಶ್ಯಕ ಪದವೃಂದದ ಹುದ್ದೆಗಳನ್ನು ಕಾಲಕಾಲಕ್ಕೆ ನೇರ ನೇಮಕಾತಿ ಹಾಗೂ ಪದೋನ್ನತಿಗಳ ಮೂಲಕ ಭರ್ತಿ ಮಾಡಲಾಗುತ್ತಿದ್ದು, ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ, ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಿಂದ ನಿಗಮದ ದೈನಂದಿನ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.</td></tr>
</table>

| | | |
|---|---|---|
| | | ಮುಂದುವರೆದು, ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಖಾಲಿ ಇರುವ 96-ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್), 8-ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್), 251-ಸಹಾಯಕ ಇಂಜಿನಿಯರ್(ವಿದ್ಯುತ್) ಮತ್ತು 32-ಸಹಾಯಕ ಇಂಜಿನಿಯರ್(ಸಿವಿಲ್), 86-ಕಿರಿಯ ಆಪ್ತ ಸಹಾಯಕ, 750-ಕಿರಿಯ ಸ್ಟೇಷನ್ ಪರಿಚಾರಕ ಮತ್ತ 5250- ಕಿರಿಯ ಪವರ್ ಮ್ಯಾನ್ ಒಟ್ಟು 6473 ಹುದ್ದೆಗಳನ್ನು ಭರ್ತಿ ಮಾಡುವ ವಿಷಯದಲ್ಲಿ, ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. |
| ಇ) | ನಿರುದ್ಯೋಗ ಸಮಸ್ಯೆ ಕಡಿಮೆ ಮಾಡಲು ಕೆಪಿಟಿಸಿಎಲ್‌ನಲ್ಲಿ ಯಾವ ಹೊಸ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ: (ವಿವರ ನೀಡುವುದು) | ನಿರುದ್ಯೋಗ ಸಮಸ್ಯೆ ಕಡಿಮೆ ಮಾಡಲು, ಕವಿಪ್ರನಿನಿಯಲ್ಲಿ ಕಾಲಕಾಲಕ್ಕೆ ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. |
| ಈ) | ವಿದ್ಯುತ್ ಕ್ಷೇತ್ರದಲ್ಲಿ ಕೌಶಲ್ಯ ತರಬೇತಿ ನೀಡಿದರೆ ಉದ್ಯೋಗಾವಕಾಶ ಹೆಚ್ಚಿಸುವುದಕ್ಕೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು | ಕೆ.ಆರ್.ಇ.ಡಿ.ಎಲ್ ವತಿಯಿಂದ ಸೂರ್ಯಮಿತ್ರ ಕೌಶಲ್ಯ ತರಬೇತಿಯನ್ನು ಐ.ಟಿ.ಐ / ಡಿಪ್ಲೋಮೊ ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ. 171 ಅಭ್ಯರ್ಥಿಗಳು ಇದುವರೆವಿಗೂ ತರಬೇತಿಯನ್ನು ಪಡೆದಿರುತ್ತಾರೆ. ಕೇಂದ್ರ ಕಚೇರಿ ನಾಗರಬಾವಿಯಲ್ಲಿ ಕೆ.ಆರ್.ಇ.ಡಿ.ಎಲ್ ವತಿಯಿಂದ ಪಾವಗಡ ಸೋಲಾರ್ ಪಾರ್ಕ್‌ನಲ್ಲಿ ಸೂರ್ಯಮಿತ್ರ ಕೌಶಲ್ಯ ತರಬೇತಿಯನ್ನು ಐ.ಟಿ.ಐ / ಡಿಪ್ಲೋಮೊ ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ. 150 ಅಭ್ಯರ್ಥಿಗಳು ಇದುವರೆವಿಗೂ ತರಬೇತಿಯನ್ನು ಪಡೆದಿರುತ್ತಾರೆ. |

ಸಂಖ್ಯೆ: ಎನರ್ಜಿ 72 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು